KAUK620019842026

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.**

**-:ಉಪಸ್ಥಿತರು:-**

**ಶ್ರೀ ಈರಣ್ಣ ಹುಣಶಿಕಟ್ಟಿ.,**

**ಬಿ.ಕಾಂ.,ಎಲ್.ಎಲ್.ಬಿ.,**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**

**ಪ್ರ.ದ.ನ್ಯಾ ದಂಡಾಧಿಕಾರಿ, ಹೊನ್ನಾವರ.**

**ದಿನಾಂಕ 04 ನೇ ಆಗಸ್ಟ್ ಮಾಹೆಯ 2026 ನೇ ಇಸವಿ**

**ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ 250/2026**

**ಅರ್ಜಿದಾರರು:-** **ಝೈನುಲಅಬಿದ್ದೀನ್ ತಾಹೀರ್ ಕಟ್ಟೆಮನೆ,**
ವಯಸ್ಸು ಸುಮಾರು:- 43 ವರ್ಷ,
ಉದ್ಯೋಗ:- ರೈತ,
ಸಾಕೀನ:- ಮುಸ್ಲಿಂಕೇರಿ, ಹೆರಂಗಡಿ,
ತಾಲೂಕು:- ಹೊನ್ನಾವರ (ಉ.ಕ.).
**(ಅರ್ಜಿದಾರರ ಪರವಾಗಿ ಶ್ರೀಮತಿ. ಎಸ್.ಎನ್.ಎನ್, ವಕೀಲರು.)**

**-ವಿರುದ್ಧ-**

**ಎದುರುದಾರರು:-** **ಮಾನ್ಯ ತಹಶೀಲ್ದಾರರು,**
ತಾಲೂಕು:- ಹೊನ್ನಾವರ (ಉ.ಕ.).
. **(ಎದುರುದಾರರು ಏಕಪಕ್ಷೀಯ.)**

*****

**-: ಆದೇಶ :-**

ಅರ್ಜಿದಾರರು, ಸದರಿ ಅರ್ಜಿಯನ್ನು ಜನನ ಮತ್ತು ಮರಣ ನೋಂದಣಿ ಕಾಯ್ದೆ 1969 ರ ಕಲಂ. 13(3) ರಡಿಯಲ್ಲಿ ಸಲ್ಲಿಸಿದ್ದು ಇರುತ್ತದೆ.

ಅರ್ಜಿದಾರರಾದ ಝೈನುಲಅಬಿದ್ದೀನ್ ತಾಹೀರ್ ಕಟ್ಟೆಮನೆ (Zainulabiddin Tahir Kattemane) ರವರು ದಿನಾಂಕ 15-03-1983 ರಂದು ಹೊನ್ನಾವರ ತಾಲೂಕಿನ ಹೆರಂಗಡಿ ಗ್ರಾಮದಲ್ಲಿರುವ ಅರ್ಜಿದಾರರ ಮನೆಯಲ್ಲಿ ಜನನ ಹೊಂದಿರುವುದಾಗಿ ಎದುರುದಾರರು ತಮ್ಮ ಜನನ ಮತ್ತು ಮರಣ ನೋಂದಣಿ ರಿಜಿಸ್ಟರ್ ನಲ್ಲಿ ಜನನ ದಿನಾಂಕವನ್ನು ನೋಂದಾಯಿಸಿಕೊಂಡು ಜನನ ದೃಢೀಕರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ಆದೇಶಿಸಬೇಕೆಂದು ಪ್ರಾರ್ಥನೆ ಸಲ್ಲಿಸಿರುತ್ತಾರೆ.

2. <u>ಅರ್ಜಿದಾರರ ಅರ್ಜಿಯ ಸಂಕ್ಷಿಪ್ತ ಸಂಗತಿಗಳು ಈ ಕೆಳಕಂಡಂತೆ ಇರುತ್ತದೆ:-</u>

ಅರ್ಜಿಯಲ್ಲಿ ಹೇಳಿರುವಂತೆ, ಅರ್ಜಿದಾರರಾದ ಝೈನುಲಅಬಿದ್ದೀನ್ ತಾಹೀರ್ ಕಟ್ಟೆಮನೆ (Zainulabiddin Tahir Kattemane) ರವರು ದಿನಾಂಕ 15-03-1983 ರಂದು ಹೊನ್ನಾವರ ತಾಲೂಕಿನ ಹೆರಂಗಡಿ ಗ್ರಾಮದಲ್ಲಿರುವ ಅರ್ಜಿದಾರರ ಮನೆಯಲ್ಲಿ ಜನನವಾಗಿದ್ದು ಇರುತ್ತದೆ. ಮುಂದುವರೆದು, ಅರ್ಜಿದಾರರ ಕುಟುಂಬದವರಿಗೆ ಅಷ್ಟೊಂದು ಕಾನೂನು ತಿಳುವಳಿಕೆ ಇಲ್ಲದೇ ಇರುವುದರಿಂದ ಅರ್ಜಿದಾರರ ಜನನ ದಿನಾಂಕವನ್ನು ಸಂಬಂಧಪಟ್ಟ ಕಛೇರಿಯಲ್ಲಿ ಮೌಖಿಕವಾಗಿ ತಿಳಿಸಿದ್ದು, ಲಿಖಿತವಾಗಿ ಅರ್ಜಿ ನೀಡಿ ನೋಂದಣಿ ಮಾಡಿಸಿದ್ದು ಇರುವುದಿಲ್ಲ. ಆದರೆ, ಈಗ ಅರ್ಜಿದಾರರಿಗೆ ಪಾಸ್ ಪೋರ್ಟ್ ಹಾಗೂ ಇನ್ನಿತರೆ ಅವಶ್ಯಕತೆಯ ಸಲುವಾಗಿ ತಮ್ಮ ಜನನ ಪ್ರಮಾಣ ಪತ್ರವನ್ನು ಪಡೆಯುವುದು ಅತೀ ಅವಶ್ಯಕ ಇರುತ್ತದೆ. ಈ ಕುರಿತು ಜನನ ಪ್ರಮಾಣ ಪತ್ರದ ದಾಖಲೆಯನ್ನು ಪೂರೈಸುವಂತೆ ಎದುರುದಾರರ ಕಛೇರಿಯಲ್ಲಿ ಅರ್ಜಿ ಸಲ್ಲಿಸಿದಾಗ, ಅರ್ಜಿದಾರರ ಜನನ ದಿನಾಂಕವು ಸಂಬಂಧಪಟ್ಟ ದಾಖಲೆಗಳಲ್ಲಿ ನೋಂದಣಿಯಾಗಿರುವುದಿಲ್ಲವೆಂದು ಎದುರುದಾರರು ಅರ್ಜಿದಾರರ ಜನನದ ಕುರಿತು ದಿನಾಂಕ 30-06-2026 ರಂದು ಅಲಭ್ಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಆದ್ದರಿಂದ, ಅರ್ಜಿಯಲ್ಲಿ ಕೇಳಿರುವಂತೆ ಆದೇಶವನ್ನು ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

3. ನಂತರ ಮಾನ್ಯ ನ್ಯಾಯಾಲಯವು ಎದುರುದಾರರಿಗೆ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ಎದುರುದಾರರಿಗೆ ಜಾರಿಯಾಗಿದ್ದರೂ ಸಹ, ಎದುರುದಾರರು ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, ಎದುರುದಾರರನ್ನು ಏಕಪಕ್ಷೀಯ ಸ್ಥಾನದಲ್ಲಿ ಇರಿಸಲಾಯಿತು.

4. ಅರ್ಜಿದಾರರ ಪರ ವಕೀಲರ ವಾದವನ್ನು ಆಲಿಸಲಾಯಿತು, ದಾಖಲೆಗಳನ್ನು ಪರಿಶೀಲಿಸಲಾಯಿತು.

5. ಈ ನ್ಯಾಯಾಲಯವು ಈ ಕೆಳಗಿನ ಅಂಶಗಳನ್ನು ನಿರ್ಧರಿಸುತ್ತದೆ.

1. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೇಳಿರುವಂತಹ ಪರಿಹಾರ ಪಡೆಯಲು ಅರ್ಹರೇ?
2. ಮಾಡುವ ಆದೇಶ ಏನು?

6. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿದೆ.

**ಅಂಶ ಸಂಖ್ಯೆ 1** :- **ಸಕಾರಾತ್ಮಕವಾಗಿ**

**ಅಂಶ ಸಂಖ್ಯೆ 2** :- ಅಂತಿಮ ಆದೇಶದಂತೆ,

ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ,

*****

## -: ಕಾರಣಗಳು :-

7. **ಅಂಶ ಸಂಖ್ಯೆ 1**:- ಪ್ರಸ್ತುತ ಅರ್ಜಿಯಲ್ಲಿ ಪ್ರತಿಪಾದಿಸಿದ ಸಂಗತಿಗಳನ್ನು ಪುಷ್ಠೀಕರಿಸುವ ಸಲುವಾಗಿ ಅರ್ಜಿದಾರರು ಪಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಟ್ಟಿದ್ದು, ಮುಖ್ಯ ವಿಚಾರಣೆಯ ಬದಲಾಗಿ ಸಾಕ್ಷ್ಯ ಪ್ರಮಾಣಪತ್ರವನ್ನು ಸಲ್ಲಿಸಿ ಅರ್ಜಿಯಲ್ಲಿ ಹೇಳಿರುವ ಸಂಗತಿಗಳನ್ನೇ ಪುನರುಚ್ಚರಿಸಿರುತ್ತಾರೆ ಹಾಗೂ ನಿಪಿ-1 ರಿಂದ ನಿಪಿ-3 ದಾಖಲೆಗಳನ್ನು ನಿಶಾನೆಯಾಗಿ ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

ಮುಂದುವರೆದು, ಅರ್ಜಿದಾರರಾದ ಝೈನುಲಅಬಿದ್ದೀನ್ ತಾಹೀರ್ ಕಟ್ಟೆಮನೆ (Zainulabiddin Tahir Kattemane) ರವರು ದಿನಾಂಕ 15-03-1983 ರಂದು ಹೊನ್ನಾವರ ತಾಲೂಕಿನ ಹೆರಂಗಡಿ ಗ್ರಾಮದಲ್ಲಿರುವ ಅರ್ಜಿದಾರರ ಮನೆಯಲ್ಲಿ ಜನನ ಹೊಂದಿರುತ್ತಾರೆ. ಮುಂದುವರೆದು, ಅರ್ಜಿದಾರರ ಕುಟುಂಬದವರಿಗೆ ಅಷ್ಟೊಂದು ಕಾನೂನು ತಿಳುವಳಿಕೆ ಇಲ್ಲದೇ ಇರುವುದರಿಂದ ಅರ್ಜಿದಾರರ ಜನನ ದಿನಾಂಕವನ್ನು ಸಂಬಂಧಪಟ್ಟ ಕಛೇರಿಯಲ್ಲಿ ಮೌಖಿಕವಾಗಿ ತಿಳಿಸಿದ್ದು, ಲಿಖಿತವಾಗಿ ಅರ್ಜಿ ನೀಡಿ ನೋಂದಣಿ ಮಾಡಿಸಿದ್ದು ಇರುವುದಿಲ್ಲ. ಆದರೆ, ಈಗ ಅರ್ಜಿದಾರರಿಗೆ ಪಾಸ್ ಪೋರ್ಟ್ ಹಾಗೂ ಇನ್ನಿತರ ಅವಶ್ಯಕತೆಯ ಸಲುವಾಗಿ ತಮ್ಮ ಜನನ ಪ್ರಮಾಣ ಪತ್ರವನ್ನು ಪಡೆಯುವುದು ಅತೀ ಅವಶ್ಯಕ ಇರುತ್ತದೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮುದುವರೆದು, ಪಿ.ಡಬ್ಲ್ಯೂ-1 ರವರು, ಸಂಬಂಧಪಟ್ಟ ಜನನ ಮತ್ತು ಮರಣ ನೋಂದಣಾಧಿಕಾರಿಗಳು ದಿನಾಂಕ 30-06-2026 ರಂದು ನೀಡಿರುವ ಅಲಭ್ಯ ಪ್ರಮಾಣಪತ್ರವನ್ನು ನಿಪಿ-1 ಎಂದು, ಅರ್ಜಿದಾರರ ಆಧಾರಕಾರ್ಡ್ ಹಾಗೂ ವರ್ಗಾವಣಾ ಪ್ರಮಾಣ ಪತ್ರಗಳ ನೋಟರೈಸ್ಡ ಪ್ರತಿಗಳನ್ನು ನಿಪಿ-2 ಮತ್ತು ನಿಪಿ-3 ಎಂದು ಗುರುತಿಸಿರುತ್ತಾರೆ. ಸದರಿ ದಾಖಲಾತಿಗಳನ್ನು ಪರಿಶೀಲಿಸಿ ನೋಡಿದಾಗ, ಅರ್ಜಿದಾರರ ಜನನ ದಿನಾಂಕವು ಜನನ ಮತ್ತು ಮರಣ ರಿಜಿಸ್ಟರ್ ದಾಖಲಾತಿಯಲ್ಲಿ ನೋಂದಣಿಯಾಗಿರುವುದಿಲ್ಲವೆಂದು ಕಂಡು ಬರುತ್ತದೆ.

ಮುಂದುವರೆದು, ನಿಪಿ-2 ಮತ್ತು ನಿಪಿ-3 ರ ದಾಖಲೆಗಳಲ್ಲಿ ಅರ್ಜಿದಾರರ ಜನನ ದಿನಾಂಕವು 15-03-1983 ಎಂಬುದಾಗಿ ನಮೂದಾಗಿದ್ದು ಕಂಡು ಬರುತ್ತದೆ. ಆದರೆ, ಈಗ ಅರ್ಜಿದಾರರಿಗೆ ಪಾಸ್ ಪೋರ್ಟ್ ಹಾಗೂ ಇನ್ನಿತರೆ ಅವಶ್ಯಕತೆಯ ಸಲುವಾಗಿ ತಮ್ಮ ಜನನ ಪ್ರಮಾಣ ಪತ್ರವನ್ನು ಪಡೆಯುವುದು ಅತೀ ಅವಶ್ಯಕ ಇರುತ್ತದೆ ಎಂಬುದಾಗಿ ಅರ್ಜಿಯಲ್ಲಿ ಸ್ಪಷ್ಟವಾಗಿ ನಮೂದಿಸಿರುತ್ತಾರೆ. ಒಂದು ವೇಳೆ ಈ ಅರ್ಜಿಯನ್ನು ಪುರಸ್ಕರಿಸದೇ ಇದ್ದಲ್ಲಿ, ಅರ್ಜಿದಾರರಿಗೆ

ತುಂಬಲಾರದ ನಷ್ಟ ಉಂಟಾಗುತ್ತದೆ ಎಂಬ ಅಭಿಪ್ರಾಯವನ್ನು ಮಾನ್ಯ ನ್ಯಾಯಾಲಯವು ವ್ಯಕ್ತಪಡಿಸುತ್ತದೆ. ಒಂದಾನುವೇಳೆ ಈ ಅರ್ಜಿಯನ್ನು ಪುರಸ್ಕರಿಸಿದರೇ, ಎದುರುದಾರರಿಗಾಗಲೀ ಅಥವಾ ಇತರರಿಗಾಗಲೀ ಯಾವುದೇ ರೀತಿಯ ನಷ್ಟ ಉಂಟಾಗಲಾರದೆಂದು ಅಭಿಪ್ರಾಯಪಟ್ಟು ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆಂಬ ತೀರ್ಮಾನಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ. **ಆದ್ದರಿಂದ ಅಂಶ ಸಂಖ್ಯೆ 1 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

8. **ಅಂಶ ಸಂಖ್ಯೆ 2** :- ಅಂಶ ಸಂಖ್ಯೆ 1 ರಲ್ಲಿ ಚರ್ಚಿಸಿದ ಕಾರಣಗಳಿಂದಾಗಿ, ಈ ಕೆಳಕಂಡಂತೆ ಅಂತಿಮ ಆದೇಶ ಮಾಡಲಾಗಿದೆ.

## -:**ಆದೇಶ**:-

ಅರ್ಜಿದಾರರು, ಜನನ ಮತ್ತು ಮರಣ ನೋಂದಣಿ ಕಾಯ್ದೆ-1969 ರ ಕಲಂ. 13(3) ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಅರ್ಜಿದಾರರಾದ ಝೈನುಲಅಬಿದ್ದೀನ್ ತಾಹೀರ್ ಕಟ್ಟೆಮನೆ (Zainulabiddin Tahir Kattemane) ರವರು ದಿನಾಂಕ 15-03-1983 ರಂದು ಹೊನ್ನಾವರ ತಾಲೂಕಿನ ಹೆರಂಗಡಿ ಗ್ರಾಮದಲ್ಲಿರುವ ಅರ್ಜಿದಾರರ ಮನೆಯಲ್ಲಿ ಜನನ ಹೊಂದಿರುತ್ತಾರೆ ಎಂದು ತಮ್ಮ ಜನನ ಮತ್ತು ಮರಣ ದಾಖಲಾತಿಯಲ್ಲಿ ನೋಂದಾಯಿಸಿಕೊಳ್ಳುವಂತೆ ಎದುರುದಾರರಿಗೆ ಆದೇಶಿಸಲಾಗಿದೆ.

ಅರ್ಜಿದಾರರಿಂದ ಅವಶ್ಯಕ ಶುಲ್ಕ ಪಡೆದು ಅವರ ಜನನ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರ್ತಿಗೆ ಗಣಕಯಂತ್ರದಲ್ಲಿ ನೇರವಾಗಿ ಗಣಕೀಕೃತ ಮಾಡಿಸಿ, ನಂತರ ಅದನ್ನು ಓದಿ ತಪ್ಪುಗಳನ್ನು ತಿದ್ದಿದ ನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕ 04-08-2026 ರಂದು ಘೋಷಿಸಲಾಯಿತು.)

**(ಈರಣ್ಣ ಹುಣಶಿಕಟ್ಟಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ಹೊನ್ನಾವರ.**

****

## -: ಅನುಬಂಧ :-

1. **ಅರ್ಜಿದಾರರ-ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಃ-**

ಪಿ.ಡಬ್ಲ್ಯೂ-1 – ಝೈನುಲಅಬಿದ್ದೀನ್ ತಾಹೀರ್ ಕಟ್ಟೆಮನೆ.

2. **ಅರ್ಜಿದಾರರ- ಪರ ಗುರುತಿಸಿಕೊಂಡಿರುವ ದಾಖಲಾತಿಗಳುಃ-**

ನಿಪಿ-1 – ಅಲಭ್ಯ ಪ್ರಮಾಣ ಪತ್ರ.

ನಿಪಿ-2 – ಆಧಾರ ಕಾರ್ಡ್ ನ ನೋಟರೈಸ್ಡ ಪ್ರತಿ.

ನಿಪಿ-3 – ವರ್ಗಾವಣಾ ಪ್ರಮಾಣ ಪತ್ರದ ನೋಟರೈಸ್ಡ ಪ್ರತಿ.

3. **ಎದುರುದಾರರ- ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಃ-**

-ಇಲ್ಲ-

4. **ಎದುರುದಾರರ- ಪರ ಗುರುತಿಸಿಕೊಂಡಿರುವ ದಾಖಲಾತಿಗಳುಃ-**

-ಇಲ್ಲ-

ಸಹಿ ಇದೆ.

**(ಈರಣ್ಣ ಹುಣಶಿಕಟ್ಟಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ಹೊನ್ನಾವರ.**

****